ಶ್ರೀ ಬಿ. ದೊಡ್ಡಬೋರೇಗೌಡ.—ರೋಡ್ ಮೇಲಿನ ಮರಗಳನ್ನು ಕತ್ತರಿಸುವುದು ಗಮನಕ್ಕೆ ಬಂದಿಲ್ಲ ಎಂದು ಉತ್ತರ ಹೇಳಿದೆ. ಮಾನ್ಯ ಮಂತ್ರಿಗಳು ಪ್ರವಾಸ ಮಾಡುವಾಗ ಅನೇಕ ರಸ್ತೆಗಳಲ್ಲಿ ಮರ ಕಡಿದು ರೆಂಬೆ ಕತ್ತರಿಸಿ ಹಾಕಿರುವುದು ಅನೇಕ ಕಡೆ ನೋಡಿದ್ದಾರೆ. ಮೈಸೂರು ರೋಡ್ ಮೇಲೆ ಹೋಗುವಾಗ ಇದನ್ನು ಅವರು ನೋಡಿರುವುದರಿಂದ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಶೋರಾಪೂರ ತಾಲ್ಲೂಕಿಗೆ ಸಂಬಂಧಪಟ್ಟದ್ದು ಇಲ್ಲಿ ಹೇಳಿದೆ. ಯಾವ ರೋಡ್ ಮೇಲೆ ಎಷ್ಟು ಮರ ಕಡಿದಿದ್ದಾರೆ ಎನ್ನುವುದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

ಶ್ರೀ ಸಿದ್ದಯ್ಯ ಕಾಶೀನುತ. ಹುಣಸೇ ಹಣ್ಣಿನ ಬೆಲೆ ಹೆಚ್ಚಾಗುತ್ತಿರುವುದರಿಂದ ಹುಣಸೇ ಮರ ರಕ್ಷಣೆ ಮಾಡಬೇಕಾದದು ಒಳ್ಳೆಯದಲ್ಲವೇ ?

ಶ್ರೀ ಬಿ. ರಾಚಯ್ಯ.—ಹುಣಸೆ ಮರ ರಕ್ಷಿತ ಗಿಡ ಎಂದು ಪರಿಗಣಿಸಬೇಕೆಂಬುದು ಪರಿಶೀಲನೆಯಲ್ಲಿದೆ.

Forged Letters of Resignation

540 Sri H. PUTTADASA (Sathanur).—

Will the Minister for Revenue and Forests be pleased to state :—

(*a*) whether it is a fact that the previous Tahsildar of Kanakapura taluk acted on a forged letter of resignation alleged to have been sent by President and Vice-President of Kanakapura Municipality;

(*b*) whether the Divisional Commissioner conducted the enquiry and reported his findings that those letters were forged ;

(*c*) whether the person or persons who had a hand in that forgery have been finally located;

(*d*) if not the reason for not being able to locate the person or persons responsible in the matter ?

A.—Sri B. RACHAIAH (Minister for Revenue and Forests).—

(*a*) It is true that the previous Tahsildar of Kanakapura taluk had accepted the resignations of Sriyuths K. S. Vasudeva Rao, K. S. Basappa to the Councillorship under Section 40 of the Mysore Municipalities Act, 1964.

(*b*) In pursuance of the orders issued by the Hon'ble High Court of Mysore, in writ petitions No. 271, 272, 345 of 1967 the Divisional Commissioner, Bangalore Division coducted enquiry and after enquiry it was decided that the purported letters of resignation by Sri K. S. Vasudeva Rao and K. S. Basappa from the Councillorship were not genuine

(*c*) No.

(*d*) Location of the person or persons responsible for the spurious letters was not the object of the enquiry.

ಶ್ರೀ ಎಚ್. ಪುಟ್ಟಸ್ವಾಮಿ.—ಸ್ವಾಮಿ, ಕನಕಪುರ ಮುನಿಸಿಪಲ್ ಕೌನ್ಸಿಲರ್ ಆಗಿರತಕ್ಕಂಥ ಶ್ರೀ ವಾಸುದೇವಾಚಾರ್ ಮತ್ತು ಶ್ರೀ ಬಸವಪ್ಪ ಅವರ ರಾಜೀನಾಮೆಯ ಬಗ್ಗೆ ತಹಶೀಲ್ದಾರರಿಗೆ ಮೊದಲೇನೇ ತಿಳಿಸಿ ರಾಜೀನಾಮೆ ಪತ್ರ ಸೃಷ್ಟಿಸಿದ್ದಾರೆ, ಅದು ಸುಳ್ಳು ಇದೆ ಎಂದು 15 ದಿವಸ ಮೊದಲು ಸೂಚನೆ ಕೊಟ್ಟಿದ್ದರಲ್ಲವೇ ? ರಾಜೀನಾಮೆ ಪತ್ರ ಬರುತ್ತದೆ ಅದನ್ನು ತಡೆಹಿಡಿಲನೆ ಮಾಡಿ ನಮಗೆ ತೋರಿಸಿ ಅಮೇಲೆ ಆಕ್ಸೆಪ್ಟ್ ಮಾಡಿ ಎಂದು ಹೇಳಿದ್ದರು. ಹಾಗೆ ಮಾಡದೆ ಅದನ್ನು ಆಕ್ಸೆಪ್ಟ್ ಮಾಡಿಕೊಂಡಿರುವುದರಿಂದ ಇದರಲ್ಲಿ ತಹಶೀಲ್ದಾರರ ಕೈವಾಡ ಇದೆ ಎಂದು ತೀರ್ಮಾನಕ್ಕೆ ಬರುವುದು ಆಗುತ್ತದಲ್ಲವೇ?

ಶ್ರೀ ರಾಚಯ್ಯ.—ಅವರು ಮೊದಲು ಮುನ್ಸೂಚನೆ ಕೊಟ್ಟಿದ್ದರು ಎಂಬುದು ಗಮನಕ್ಕೆ ಬಂದಿಲ್ಲ. ರಾಜೀನಾಮೆ ಕೊಟ್ಟದ್ದು ನಿರಿಯಾದ ರಾಜೀನಾಮೆಯಾಗಿರಲಿಲ್ಲ. ಅದು ಫೋರ್ಜರಿ ಮಾಡಿ ಕಳಿಸಿದ್ದು ಎಂದು ಗೊತ್ತಾಯಿತು.

ಶ್ರೀ ಜಿ. ದುಗ್ಗಪ್ಪ.—ಅದನ್ನು ಒಪ್ಪಿಕೊಂಡಿರುವುದರಿಂದ ಈ ಅಪರಾಧಕ್ಕೆ ತಹಶೀಲದಾರರು ಕಾರಣರು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ಡಿವಿಜನಲ್ ಕಮೀಷನರ್ ಅವರಿಗೆ ವಿಚಾರಣೆ ಮಾಡಿ ಎಂದು ತಿಳಿಸಿತ್ತು. ತಹಶೀಲ್ದಾರರೇ ಕಾರಣ ಕರ್ತರು ಎಂದು ಅವರ ವರದಿ ಬಂದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಇದರ ಬಗ್ಗೆ ಏನು ಕ್ರಮ ಕೈಕೊಂಡಿದ್ದೀರಿ? ಇಂಡಿಯನ್. ಪೀನಲ್ ಕೋಡ್ ಪ್ರಕಾರ ಈ ಅಪರಾಧ ರುಜುವಾತು ಆದ ಮೇಲೆ ಇನ್‌ಕ್ವಾಯರಿಯಲ್ಲಿ ಏನು ಕ್ರಮ ತಗೆದುಕೊಂಡಿದ್ದೀರಿ?

ಶ್ರೀ ಬಿ. ರಾಚಯ್ಯ.—ಅವರನ್ನು ಸಸ್ಪೆಂಡ್ ಮಾಡಿದ್ದೇವೆ.

Sri H. SIDDAVEERAPPA.—After having suspended him, have you taken any action for the case being investigated by the police? Have you referred the matter to the police? Is it not a fit case to be investigated by the criminal branch?

ಶ್ರೀ ಬಿ. ರಾಚಯ್ಯ.—ಅದನ್ನು ರೆಫರ್ ಮಾಡಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಕೇಸು ದಾಖಲು ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ಹೈಕೋರ್ಟಿನಲ್ಲಿ ರಿಟ್ ಇತ್ತು. ಅದುದರಿಂದ ಇನ್‌ಕ್ವಾಯರಿ ಮಾಡಲು ಆಗಲಿಲ್ಲ. ಇದರ ಬಗ್ಗೆ ಡೈರೆಕ್ಷನ್ಸ್ ಕಳಿಸಿ ಕೊಟ್ಟಿದ್ದಾರೆ. ಫೋರ್ಜರಿ ಮಾಡಿದೆ ಎಂದು ರುಜುವಾತು ಆಗಿದೆ. ಮುಂದಿನ ತನಿಖೆ ನಡೆಸಬೇಕೆಂದು ಅಮೇಲೆ ಕೇಸು ರಫರ್ ಮಾಡಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಫೋರ್ಜರಿ ಮಾಡುವುದು ಒಂದು ಅಪರಾಧ ಆಗಿದೆ. ಅದನ್ನು ತಿಳಿದುಕೊಂಡು ಪತ್ರ ಒಪ್ಪಿರುವುದು ಎರಡನೇ ಅಪರಾಧ. ಈ ಎರಡು ಅಪರಾಧಗಳ ಬಗ್ಗೆ ಜಾರ್ಜ್ ಶೀಟ್ ಹಾಕಬೇಕು ಎಂದು ಪ್ರಾಸಿಕ್ಯೂಷನ್‌ನವರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಯಾರು ಫೋರ್ಜರಿ ಮಾಡಿದವರು ಎನ್ನುವ ರೆಫರನ್ಸು ಇನ್‌ಕ್ವಾಯರಿಯಲ್ಲಿ ಇರಲಿಲ್ಲ. ಅದು ಫೋರ್ಜರಿ ಮಾಡಿದ ರಾಜೀನಾಮೆ ಪತ್ರ ಅಷ್ಟೇ ಎಂದು ಪ್ರಶ್ನೆ ಕೇಳಿರುವುದಕ್ಕೆ ಅದು ಫೋರ್ಜರಿ ಎಂದು ಉತ್ತರ ಹೇಳಿದೆ.

Sri H. SIDDAVEERAPPA.—What are the terms of the enquiry? Was this enquiry conducted at the instance of the High Court or who ordered that enquiry? I am sorry to say that you are not giving proper answers and and that you are trying to hide and screen?

Sri B. RACHAIAH.—The High Court has given direction to the Government to enquire into these matters and the Divisional Commissioner was appointed as the enquiry officer. He came to the conclusion after due enquiry that these letters were forged ones.

Sri H. SIDDAVEERAPPA.—What are the directions given by the High Court?

Sri B. RACHAIAH.—The direction given by the High Court was that the Divisional Commissioner, Bangalore Division, should enquire into this matter and find out whether these resignations are genuine or otherwise.

Sri H. SIDDAVEERAPPA.—In which case, the answer given to (*d*) is not correct. Did the High Court confine itself only to this or is it not germane how that forgery started? As the Hon'ble Member Sri Sri kantaiah said, there are two offences here: One is committing forgery and the other is to use the forged letter and then take action on it.

Sri B. RACHAIAH.—It has not been found out who has forged the letter.

ಶ್ರೀ ಹೆಚ್. ಪಟ್ಟಣ್ಣ.—ಮಂತ್ರಿಗಳು ಇಲ್ಲಿ ಉತ್ತರ ಕೊಡುತ್ತಾ ಇಲ್ಲಿನ ತಹಶೀಲ್ದಾರರನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಹೇಳಿದರು. ಇವರನ್ನು ಸಸ್ಪೆಂಡ್ ಮಾಡಿರತಕ್ಕದ್ದು ಆಹಾರ ಪದಾರ್ಥಗಳನ್ನು ದುರ್ವ್ಯಯ ಮಾಡಿದುದಕ್ಕೆ ಮತ್ತು ಬೇರೆ ಇತರ ವ್ಯವಹಾರಗಳಿಗಾಗಿಯೂ ಅವರನ್ನು ಸಸ್ಪೆಂಡ್ ಮಾಡಿದರು. ಸಸ್ಪೆಂಡ್ ಮಾಡಿರುವುದು ಈ ಕಾರಣಕ್ಕಾಗಿಯೇ ಅಲ್ಲ. ಇಲ್ಲಿ ನಾನು ಹೇಳಿದಂತೆ ವಾಸುದೇವರಾವ್ ಹಾಗೂ ಬನಪ್ಪ ಇವರು 15 ದಿನಕ್ಕೆ ಮುಂಚಿತವಾಗಿಯೇ ರಾಜೀನಾಮೆ ಪತ್ರ ಬರುತ್ತದೆ. ಇದನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ ತೋರಿಸಿ ಬೇಕು ಎಂದು ಹೇಳಿದ್ದರೂ ಇದರಲ್ಲಿ ತಹಶೀಲ್ದಾರರ ಕೈವಾಡವೇ ಜಾಸ್ತಿಯಾಗಿದೆ ಎಂದು ತಿಳಿದಿದ್ದರೂ ಸರ್ಕಾರ ಏತಕ್ಕಾಗಿ ಈ ತಹಶೀಲ್ದಾರರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಲಿಲ್ಲ?

ಶ್ರೀ ಬಿ. ರಾಚಯ್ಯ.—ಇದರಲ್ಲಿ ಬಂದಿರುವ ಎನ್‌ಕ್ವೈರಿ ರಿಪೋರ್ಟ್ ಬಂದ ಮೇಲೆ ಇದರಲ್ಲಿ ತಪ್ಪು ಮಾಡಿರುವವರು ಯಾರು ಎನ್ನುವುದನ್ನು ಕಂಡುಹಿಡಿಯಲು ಇದನ್ನು ಪೋಲೀಸಿಗೆ ರೆಫರ್ ಮಾಡಿದೆ ಎಂದು ಹೇಳಿದ್ದೇನೆ.

ಶ್ರೀ ಜಿ. ದುಗ್ಗಪ್ಪ.—ಈಗ ಡಿವಿಜನಲ್ ಕಮೀಷನರ ಎನ್‌ಕ್ವೈರಿ ವರದಿಯಿದೆ, ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದೆ?

Sri B RACHAIAH.—The Offieer has been kept under suspension and I have referred the matter to the Police. I need not learn anything from the Hon'ble member as to how to run the administration.

Widening of B.H. Road

541. Sri V. L. SHIVAPPA (Tiptur).—

Will the Minister for Public Works be pleased to state :—

(*a*) whether Government are aware that the bridge situated at 5th furlong, 77th mile of B. H. road is too narrow for safe transport ;

(*b*) whether they have received representations to widen the aforesaid road ;

(*c*) if so, the steps they have taken to widen the road ?

A.—Sri VEERENDRA PATIL (Minister for Public Works).—

(*a*) No.
(*b*) Yes.
(*c*) This will be examined subject to availability of funds.